# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | ಡಾ.ಕೆ. ಗೋವಿಂದಾರಾಜ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 949 |
| ಉತ್ತರಿಸಬೇಕಾದ ದಿನಾಂಕ | 24.08.2026 |
| ಉತ್ತರಿಸಬೇಕಾದ ಸಚಿವರು | ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

******

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 3 ವರ್ಷಗಳಲ್ಲಿ ಪರಿಸರ ಪರಿಹಾರ ನಿಧಿ ಸಂಗ್ರಹಿಸಿರುವ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆ.ಎಸ್.ಪಿ.ಸಿ.ಬಿ) ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ (ಎನ್.ಜಿ.ಟಿ) ಸಲ್ಲಿಸಿರುವ ಅಫಿಡವಿಟ್‌ನಲ್ಲಿ ಹಣದ ಬಳಕೆಯ ವಿವರವಿಲ್ಲವೆಂದು ತಿಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಪರಿಸರ ಪರಿಹಾರ ನಿಧಿ ಸಂಗ್ರಹಿಸಿರುವ ಹಾಗೂ ಅದರ ಬಳಕೆಯಾಗದ ಬಗ್ಗೆ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯಲ್ಲಿ (ಎನ್.ಜಿ.ಟಿ) ಅಫಿಡವಿಟ್‌ಅನ್ನು ದಿನಾಂಕ:01.08.2026 ರಂದು ಸಲ್ಲಿಸಲಾಗಿದೆ. ಅದರ ಪ್ರತಿಯನ್ನು **ಅನುಬಂಧ-01** ರಲ್ಲಿ ಲಗತ್ತಿಸಿದೆ. |
| ಆ) | ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಕಳೆದ 3 ವರ್ಷಗಳಿಂದ ಪರಿಸರ ಪರಿಹಾರ ನಿಧಿಗೆ ಎಷ್ಟು ಮೊತ್ತ ಸಂಗ್ರಹಿಸಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು) | (see table below) |

| ಕ್ರ. ಸಂ. | ಆರ್ಥಿಕ ವರ್ಷ | ಸಂಗ್ರಹವಾದ ಒಟ್ಟು ಮೊತ್ತ ರೂ. |
|---|---|---|
| 01 | 2023-24 | 6,15,97,321.00 |
| 02 | 2024-25 | 3,93,89,063.00 |
| 03 | 2025-26 | 2,12,86,562.00 |
| ಒಟ್ಟು | | ರೂ.12,22,72,946.00 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಇ) | ಪರಿಸರ ಪರಿಹಾರ ನಿಧಿಯ ಕಾರ್ಯ ವಿಧಾನಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು) | ಪರಿಸರ ಮಾನದಂಡಗಳನ್ನು ಪಾಲಿಸದ ಅಥವಾ SPCBs/CPCBಯ ಯಾವುದೇ ನಿರ್ದೇಶನಗಳನ್ನು ಉಲ್ಲಂಘಿಸುವ ಕೈಗಾರಿಕೆಗಳು/ಸಂಸ್ಥೆಗಳಿಗೆ ಪರಿಸರ ಪರಿಹಾರವನ್ನು ವಿಧಿಸುವ ಮೂಲಕ ಸಂಗ್ರಹವಾಗುವ ಮೊತ್ತವನ್ನು ಪ್ರತ್ಯೇಕ ಬ್ಯಾಂಕ್ ಖಾತೆಯಲ್ಲಿ ಜಮಾ ಮಾಡಬೇಕು. ಸಂಗ್ರಹವಾಗುವ ಈ ಮೊತ್ತವನ್ನು ಪರಿಸರ ಸಂರಕ್ಷಣೆಗೆ ಬಳಸಿಕೊಳ್ಳಲಾಗುವುದು.<br><br>ಪರಿಸರ ಪರಿಹಾರ ಮತ್ತು ಕ್ರಿಯಾಯೋಜನೆ ನಿಧಿಯನ್ನು ಬಳಸಿಕೊಳ್ಳಲು ಪರಿಸರ ಪರಿಹಾರವನ್ನು ನಿರ್ಣಯಿಸುವ ವಿಧಾನಶಾಸ್ತ್ರದ ಕುರಿತು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಆಂತರಿಕ ಸಮಿತಿಯ ವರದಿಯಂತೆ ಪರಿಸರ ಪರಿಹಾರ ನಿಧಿಯ ಬಳಕೆಗೆ ಈ ಕೆಳಗಿನ ಯೋಜನೆಗಳನ್ನು ಪರಿಗಣಿಸಲಾಗಿದೆ. |

| | | |
|---|---|---|
| | | a) ಕೈಗಾರಿಕೆಗಳು ಷರತ್ತುಗಳ ಉಲ್ಲಂಘನೆಗಳಿಗೆ ಕೈಗೊಂಡ ಅನುಪಾಲನಾ ಪರಿಶೀಲನೆಗೆ ಪರಿವೀಕ್ಷಣೆ ಮಾಡಿ ವರದಿ ನೀಡುವುದು.<br><br>b) ನಿರಂತರ ನೀರಿನ ಗುಣಮಟ್ಟ ಕೇಂದ್ರಗಳನ್ನು ಮತ್ತು ನಿರಂತರ ಪರಿವೇಷ್ಠಕ ವಾಯು ಗುಣಮಟ್ಟ ಮಾಪನ ಕೇಂದ್ರಗಳ ಸ್ಥಾಪನೆ ಹಾಗೂ ಅಸ್ತಿತ್ವದಲ್ಲಿರುವ ಮೇಲ್ವಿಚಾರಣ ಜಾಲವನ್ನು ಬಲಪಡಿಸುವುದು.<br><br>c) ಕೈಗಾರಿಕಾ ವಲಯಗಳು/ ಸ್ವಚ್ಛ ತಂತ್ರಜ್ಞಾನಕ್ಕೆ ಸಂಬಂಧಿಸಿದ ಸಮಗ್ರ ಕೈಗಾರಿಕ ದಾಖಲೆಗಳನ್ನು ಸಿದ್ಧಪಡಿಸುವುದು.<br><br>d) ಪರಿಹಾರ ಹಾನಿಗಳ ಕುರಿತು ತನಿಖೆ ನಡೆಸುವುದು ಹಾಗೂ DPR ಗಳನ್ನು (ವಿವರವಾದ ಯೋಜನಾ ವರದಿಗಳನ್ನು) ಸಿದ್ಧಪಡಿಸುವುದು.<br><br>e) ಕಲುಷಿತ ಸ್ಥಳಗಳ ಪರಿಸರ ಪುನಶ್ಚೇತನ/ಪರಿಹಾರ ಕ್ರಮಗಳನ್ನು ಕೈಗೊಳ್ಳುವುದು.<br><br>f) ನಗರ ಸ್ಥಳೀಯ ಸಂಸ್ಥೆಗಳ (ULBs) ಮೂಲಸೌಕರ್ಯವನ್ನು ಹೆಚ್ಚಿಸುವುದು/SPCBs/PCCs ಗಳ ಸಾಮರ್ಥ್ಯ ವೃದ್ಧಿ ಮಾಡುವುದು.<br><br>ಸಂಗ್ರಹವಾಗಿರುವ ನಿಧಿಯ ಲಭ್ಯತೆಯನ್ನು ಪರಿಗಣಿಸಿ, ಪರಿಸರ ಪರಿಹಾರ ನಿಧಿಯನ್ನು ಆದ್ಯತೆಯ ಆಧಾರದ ಮೇಲೆ ಬಳಸಿಕೊಳ್ಳುವ ಉದ್ದೇಶದಿಂದ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಸದರಿ ಯೋಜನೆಗಳನ್ನು ಅಂತಿಮಗೊಳಿಸಲಿದೆ. |
| ಈ) | ಪರಿಸರ ಪರಿಹಾರ ನಿಧಿಯಿಂದ ಸಂಗ್ರಹಿಸಲಾದ ಮೊತ್ತವನ್ನು ಯಾವ ಯಾವ ಉದ್ದೇಶಗಳಿಗೆ ವಿನಿಯೋಗಿಸಲಾಗಿದೆ; (ವಿವರ ಒದಗಿಸುವುದು). | ಪರಿಸರ ಪರಿಹಾರ ನಿಧಿಯಿಂದ ಸಂಗ್ರಹಿಸಲಾದ ಮೊತ್ತವನ್ನು ಯಾವುದೇ ಉದ್ದೇಶಗಳಿಗೆ ವಿನಿಯೋಗಿಸಲಾಗಿರುವುದಿಲ್ಲ. |
| ಉ) | ಬೆಂಗಳೂರು ನಗರದಲ್ಲಿನ ವಾಯು ಮತ್ತು ಜಲ ಮಾಲಿನ್ಯದ ಸ್ಥಿತಿಯ ಕುರಿತು ಪರಿಸರ ಪುನರ್ ಸ್ಥಾಪನೆಗೆ ಕೈಗೊಂಡ ಕ್ರಮಗಳೇನು? (ವಿವರ ಒದಗಿಸುವುದು) | **ವಾಯು ಕಾಯ್ದೆ ಅಡಿಯಲ್ಲಿ ಕೈಗೊಂಡ ಕ್ರಮಗಳು:**<br><br>• ಬೆಂಗಳೂರು ನಗರದಲ್ಲಿ ವಾಯು ಮಾಲಿನ್ಯಕ್ಕೆ ಸಂಬಂಧಿಸಿದಂತೆ 11 ನಿರಂತರ ಪರಿವೇಷ್ಠಕ ವಾಯು ಗುಣಮಟ್ಟ ಮಾಪನ ಕೇಂದ್ರಗಳನ್ನು ಹಾಗೂ 13 ಮಾನವ ಚಾಲಿತ ವಾಯು ಗುಣಮಟ್ಟ ಮಾಪನ ಕೇಂದ್ರಗಳನ್ನು ಸ್ಥಾಪಿಸಿ, ವಾಯು ಗುಣಮಟ್ಟ ಮಾಪನ ಮಾಡಲಾಗುತ್ತಿದೆ.<br><br>• ಈ ವಿವರಗಳನ್ನು ನವ ದೆಹಲಿಯಲ್ಲಿರುವ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಗೆ ವಿದ್ಯುನ್ಮಾನದ |

| | | |
|---|---|---|
| | | ಮೂಲಕ ಕಳುಹಿಸಿ ಕೊಡಲಾಗುತ್ತಿದೆ ಅದರ AQI ನ್ನು ಪ್ರತಿ ದಿನ Daily AQI Bulletinನಲ್ಲಿ ಪ್ರಕಟಮಾಡಲಾಗುತ್ತಿದೆ.<br><br>• ಈ ವಿವರಗಳನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಜಾಲತಾಣದಲ್ಲಿಯೂ ನಿರಂತರವಾಗಿ ಸಾರ್ವಜನಿಕರಲ್ಲಿ ಜಾಗೃತಿಯನ್ನು ಮೂಡಿಸಲು ಹಾಗೂ ಇತರೆ ಇಲಾಖೆಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಪ್ರಕಟ ಮಾಡಲಾಗುತ್ತಿದೆ.<br><br>• ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ವಾಯು ಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ W.P.No.13029/1985(Civil-PIL) ನಿರ್ದೇಶನದಂತೆ 14 ಅಂಶಗಳ ಕಾರ್ಯ ಕ್ರಮಗಳನ್ನು 2003ರಲ್ಲಿ ಸರ್ಕಾರ ರೂಪಿಸಿದ್ದು, ಅವುಗಳನ್ನು ಬಹುತೇಕ ಜಾರಿಗೊಳಿಸಲಾಗಿದೆ.<br><br>• ಕೇಂದ್ರ ಸರ್ಕಾರ ಹೊಸದಾಗಿ ಜಾರಿಗೆ ತಂದಿರುವ ರಾಷ್ಟ್ರೀಯ ಶುದ್ಧ ಗಾಳಿ ಕಾರ್ಯಕ್ರಮ (National Clean Air Programme – NCAP) ಅಡಿಯಲ್ಲಿ, ವಾಯು ಮಾಲಿನ್ಯ ನಿಯಂತ್ರಣಕ್ಕಾಗಿ ಬೆಂಗಳೂರು ನಗರಕ್ಕೆ ಸಂಬಂಧಿಸಿದಂತೆ 44 ಅಂಶಗಳ ಕ್ರಿಯಾ ಯೋಜನೆಗಳಿದ್ದು, ಇತರೆ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಅವುಗಳನ್ನು ಸಮಗ್ರವಾಗಿ ಅನುಷ್ಠಾನಗೊಳಿಸಲಾಗುತ್ತಿದೆ.<br><br>• ಬೆಂಗಳೂರು ನಗರದ ವಾಯು ಮಾಲಿನ್ಯ ಮೂಲವನ್ನು ಅರಿಯಲು Source Apportionment Study and Emission Inventory ಅಧ್ಯಯನವನ್ನು M/s. Centre for Study for Science, Technology and Policy(CSTEP) Bengaluru ರವರಿಂದ ಕೈಗೊಳ್ಳಲಾಗಿದ್ದು, ಅಧ್ಯಯನದ ವರದಿ ಆಧರಿಸಿ ಸದರಿ 44 ಅಂಶಗಳ ಕ್ರಿಯಾ ಯೋಜನೆಗಳನ್ನು ಪರಿಷ್ಕರಿಸಿ ವಾಯು ಮಾಲಿನ್ಯ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ.<br><br>• ವಾಹನಗಳಿಂದ ಉಂಟಾಗುತ್ತಿರುವ ವಾಯು ಮಾಲಿನ್ಯವನ್ನು ನಿಯಂತ್ರಿಸಲು ಸಾರಿಗೆ ಇಲಾಖೆಯ ಸಂಯೋಗದೊಂದಿಗೆ ವಾಹನಗಳ ತಪಾಸಣೆಯನ್ನು ನಡೆಸಲಾಗುತ್ತಿದೆ.<br><br>**ಇದಲ್ಲದೆ ವಾಯು ಮಾಲಿನ್ಯ ತಡೆಗೆ ಈ ಕೆಳಕಂಡ ಕ್ರಮಗಳನ್ನು ಸಹಾ ಕೈಗೊಳ್ಳಲಾಗಿದೆ.**<br><br>• ಪರಿಸರ (ಸಂರಕ್ಷಣಾ) ಕಾಯ್ದೆ, 1986 ರಲ್ಲಿ |

| | | |
|---|---|---|
| | | ನಿಗಧಿಪಡಿಸಿರುವಂತೆ ವಾಯು ಮಾನಕಗಳು ನಿಗಧಿ ಪಡಿಸಿದ ಪರಿಮಿತಿಯೊಳಗಿರುವಂತೆ ಕಾರ್ಖಾನೆಗಳಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯಿಂದ ನೀಡುವ ಸಮ್ಮತಿ ಪತ್ರದಲ್ಲಿ ನಿಬಂಧನೆ ಹಾಕಲಾಗುತ್ತಿದೆ ಹಾಗೂ ನಿಯಮಿತವಾಗಿ ಕಾರ್ಖಾನೆಗಳನ್ನು ಪರಿವೀಕ್ಷಣೆ ಮಾಡಲಾಗುತ್ತಿದೆ.<br><br>• ಘನತ್ಯಾಜ್ಯ ಸುಡುವುದರಿಂದಾಗುವ ವಾಯು ಮಾಲಿನ್ಯವನ್ನು ತಡೆಯುವ ದೃಷ್ಟಿಯಿಂದ ಸರ್ಕಾರದ ಅಧಿಸೂಚನೆ ಸಂಖ್ಯೆ: ಅಪಜೀ 06 ಇಎನ್‌ಜಿ 2017, ದಿನಾಂಕ:03-08-2017ರಲ್ಲಿ ರಾಜ್ಯ ಸರ್ಕಾರವು ವಾಯು (ಮಾಲಿನ್ಯ ನಿಯಂತ್ರಣ ಮತ್ತು ನಿವಾರಣೆ) ಕಾಯ್ದೆ, 1981 ರ ಕಲಂ 19(5)ರ ಅಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯನ್ನು ಸೇರಿದಂತೆ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಹಾಗೂ ರಾಜ್ಯಾದ್ಯಂತ ಇರುವ ಘನತ್ಯಾಜ್ಯ ಭೂಭರ್ತಿ ಘಟಕಗಳು ಸೇರಿದಂತೆ ತೆರೆದ ಜಾಗದಲ್ಲಿ ಮರಗಿಡಗಳ ರೆಂಬೆ ಮತ್ತು ಎಲೆಗಳೂ ಸೇರಿದಂತೆ ಯಾವುದೇ ರೀತಿಯ ಘನತ್ಯಾಜ್ಯಗಳನ್ನು ಸುಡುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.<br><br>• ಕಟ್ಟಡಗಳ ನಿರ್ಮಾಣ ಮತ್ತು ಕಟ್ಟಡ ಧ್ವಂಸಗೊಳಿಸುವ ಸಮಯದಲ್ಲಿ ಉಂಟಾಗುವ ಘನತ್ಯಾಜ್ಯಗಳನ್ನು (Construction & Demolition Waste) ವಾಹನಗಳಲ್ಲಿ ಸಾಗಿಸುವ ಸಮಯದಲ್ಲಿ ಅವುಗಳಿಗೆ ಸೂಕ್ತ ಹೊದಿಕೆ ಹಾಕಿ ಸಾಗಿಸುವಂತೆ ಹಾಗೂ ಅವುಗಳಿಗೆ ನೀರಿನ ಸಿಂಪಡಣೆ ಮಾಡಿ ಯಾವುದೇ ರೀತಿಯಲ್ಲಿ ವಾಯು ಮಾಲಿನ್ಯ ಆಗದಂತೆ ಕ್ರಮ ಕೈಗೊಳ್ಳುವಂತೆ ಸಾರ್ವಜನಿಕರಿಗೂ ಸೇರಿದಂತೆ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬಿ.ಎಂ.ಆರ್.ಸಿ.ಎಲ್, ಕೆ.ಆರ್.ಡಿ.ಎಲ್, ಸಿ.ಪಿ.ಡಬ್ಲ್ಯೂ.ಡಿ, ಪಿ.ಡಬ್ಲ್ಯೂಡಿ ಇಲಾಖೆಗಳಿಗೆ ಅಗತ್ಯ ನಿರ್ದೇಶನ ನೀಡಲಾಗಿದೆ.<br><br>• ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಪರಿಸರ ವಿಮೋಚನಾ ಪತ್ರ (Environment Clearance) ನೀಡುವ ಸಂದರ್ಭದಲ್ಲಿ ಧೂಳಿನ ಕಣಗಳಿಂದ ಉಂಟಾಗುವ ಮಾಲಿನ್ಯವನ್ನು ತಡೆಗಟ್ಟುವ ದೃಷ್ಟಿಯಿಂದ ಸುತ್ತಲೂ ತಗಡಿನ ತಡೆಗೋಡೆಯನ್ನು ನಿರ್ಮಾಣ ಮಾಡುವುದನ್ನು ಹಾಗೂ ನೀರಿನ ಸಿಂಪರಣೆ ಮಾಡುವುದನ್ನು ಕಡ್ಡಾಯ ಮಾಡಲಾಗಿದೆ. |

| | | |
|---|---|---|
| | | • ನಗರದಲ್ಲಿನ ರಸ್ತೆಗಳ ಉತ್ತಮ ನಿರ್ವಹಣೆಯಿಂದ ಆವರಿಸುವ ರಸ್ತೆ ಧೂಳನ್ನು (Suspended Particulate Matter) ಉತ್ತಮ ನಿರ್ವಹಣೆಗೆ ಕ್ರಮವಹಿಸುಬೇಕಾಗಿರುತ್ತದೆ.<br><br>• ವಾಹನಗಳ ಹೊಗೆ ತಪಾಸಣಾ ಜವಾಬ್ದಾರಿ ಹಾಗೂ ನಿಗದಿತ ಮಟ್ಟಕ್ಕಿಂತ ಹೆಚ್ಚು ಹೊಗೆ ಹೊರಸೂಸುವ ವಾಹನಗಳ ವಿರುದ್ಧ ಕ್ರಮಕೈಗೊಳ್ಳುವ ಜವಾಬ್ದಾರಿಯು ಸಾರಿಗೆ ಇಲಾಖೆಯ ಕಾರ್ಯವ್ಯಾಪ್ತಿಗೆ ಬರುತ್ತದೆ. ಆದಾಗ್ಯೂ, ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ವಾಯು ಮಾಲಿನ್ಯವು, ಸಾರಿಗೆ ವಲಯದಿಂದ ಉಂಟಾಗುತ್ತಿರುವುದನ್ನು ತಿಳಿದು ಮಂಡಳಿಯು ಡೀಸೆಲ್ ಮತ್ತು ಪೆಟ್ರೋಲ್ ವಾಹನಗಳು ಹೊರಸೂಸುವ ಹೊಗೆಯನ್ನು ಮಾಪನ ಮಾಡಲು ಸುಸಜ್ಜಿತ ಮಾಲಿನ್ಯ ಮಾಪನ ಉಪಕರಣಗಳನ್ನೊಳಗೊಂಡ 12 ಹೊಗೆ ಮಾಪನ ಮಾಡುವ ಸಂಚಾರಿ ವಾಹನಗಳನ್ನು ಖರೀದಿಸಿದ್ದು, ಈ 12 ವಾಹನಗಳ ಪೈಕಿ 6 ವಾಹನಗಳು ಬೆಂಗಳೂರು ನಗರಕ್ಕೆ ಹಂಚಿಕೆ ಮಾಡಲಾಗಿದೆ. ಈ ವಾಹನಗಳು ಸಾರಿಗೆ ಇಲಾಖೆ, ಪೊಲೀಸ್ ಇಲಾಖೆ, ಬಿ.ಎಂ.ಟಿ.ಸಿ ಮತ್ತು ಕೆ.ಎಸ್.ಆರ್.ಟಿ.ಸಿ ಸಂಸ್ಥೆಗಳ ಸಹಾಯದೊಂದಿಗೆ ಜಂಟಿ ಕಾರ್ಯಾಚರಣೆ ನಡೆಸಲಾಗುತ್ತಿದ್ದು, ಮಿತಿಗಿಂತ ಹೆಚ್ಚು ಹೊಗೆ ಹೊರಸೂಸುವ ವಾಹನಗಳ ಮೇಲೆ ಕಾನೂನಾತ್ಮಕವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ.<br><br>• ವಾಹನ ಮಾಲಿನ್ಯ ತಗ್ಗಿಸುವ ಉದ್ದೇಶದಿಂದ ಕೇಂದ್ರ ಸರ್ಕಾರದ ನಿಯಮದನ್ವಯ ಏಪ್ರಿಲ್ 2020ರಿಂದ ವಾಹನಗಳು ಭಾರತ್ ಸ್ಟೇಜ್ VI ಎಂಜಿನ್ ಹಾಗೂ ಉರುವಲು (Fuel) ಬಳಸುವುದು ಕಡ್ಡಾಯವಾಗಿದೆ.<br><br>• ಪ್ರತಿ ದಿನ ಬೆಂಗಳೂರಿನ 11 ನಿರಂತರ ಪರಿವೇಷ್ಟಕ ವಾಯು ಗುಣಮಟ್ಟ ಮಾಪನ ಕೇಂದ್ರಗಳ ವಾಯುಗುಣಮಟ್ಟ ಸೂಚ್ಯಂಕವನ್ನು (AQI) ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರುಗಳಿಗೆ ಹಾಗೂ ವಾರ್ತಾ ಇಲಾಖೆಗೆ ಎಸ್.ಎಂ.ಎಸ್ ಮುಖಾಂತರ ವಾರ್ತಾ ಇಲಾಖೆಗೆ ಹಾಗೂ ಇತರರಿಗೆ ಮಾಹಿತಿಗಾಗಿ ಕಳುಹಿಸಲಾಗುತ್ತಿದೆ.<br><br>**ಜಲ ಕಾಯ್ದೆ ಅಡಿಯಲ್ಲಿ ಕೈಗೊಂಡ ಕ್ರಮಗಳು:**<br><br>• ಬೆಂಗಳೂರು ನಗರದಲ್ಲಿ ಹೆಚ್ಚುವರಿಯಾಗಿ ಉತ್ಪತ್ತಿಯಾಗಿ ಸಂಸ್ಕರಿಸದೆ ಉಳಿದ ಗೃಹತ್ಯಾಜ್ಯ ನೀರು ಅಕ್ಕ ಪಕ್ಕದ ಹಳ್ಳಗಳಿಗೆ ಹಾಗೂ ಜಲ ಮೂಲಗಳಿಗೆ ಸೇರಿ ಜಲ ಮಾಲಿನ್ಯ ಉಂಟಾಗುತ್ತಿರುತ್ತದೆ. ಈ ಸಂಬಂಧ ಮಂಡಳಿಯು BWSSBಗೆ ಹಾಗೂ BBMPಗೆ ಜಲ ಮೂಲಗಳು |

| | | |
|---|---|---|
| | | ಮಾಲಿನ್ಯ ಉಂಟಾಗುತ್ತಿರುವುದನ್ನು ತಡೆಗಟ್ಟಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿ ನೋಟಿಸ್ ಗಳನ್ನು ನೀಡಲಾಗಿರುತ್ತದೆ.<br><br>• ಬೆಂಗಳೂರು ನಗರದಲ್ಲಿ ಗೃಹ ತ್ಯಾಜ್ಯ ನೀರನ್ನು ಸಂಸ್ಕರಿಸಲು ಒಟ್ಟು 36 STP ಗಳನ್ನು BWSSB ಯು ಸ್ಥಾಪಿಸಿ ಕಾರ್ಯ ನಿರ್ವಹಿಸುತ್ತಿದೆ.<br><br>• ಬೆಂಗಳೂರು ನಗರದಲ್ಲಿ ಉತ್ಪತ್ತಿಯಾಗುವ ಗೃಹ ತ್ಯಾಜ್ಯ ನೀರಿನ ಪ್ರಮಾಣ 1348.5 MLD ಮತ್ತು ಸಂಸ್ಕರಿಸಿದ ಗೃಹ ತ್ಯಾಜ್ಯ ನೀರಿನ ಪ್ರಮಾಣ 1212.71 MLD ಮತ್ತು ಗೃಹ ತ್ಯಾಜ್ಯ ನೀರಿನ ಸಂಸ್ಕರಣೆಯಲ್ಲಿನ ಅಂತರ(Gap) 135.79 MLD ಆಗಿರುತ್ತದೆ.<br><br>• ಸಂಸ್ಕರಿಸಿದ ಗೃಹ ತ್ಯಾಜ್ಯ ನೀರಿನ ಪ್ರಮಾಣವು-825.05 MLD ಆಗಿದ್ದು, ಇದನ್ನು ನೀರಾವರಿ, ತೋಟಗಾರಿಕೆ, ಕೆರೆ ಪುನರುಜ್ಜೀವನಕ್ಕೆ ಮರುಬಳಕೆ ಮಾಡಲಾಗುತ್ತಿದೆ.<br><br>• ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಇನ್ನು 27 ಗೃಹ ತ್ಯಾಜ್ಯ ನೀರಿನ ಸಂಸ್ಕರಣಾ ಘಟಕಗಳು (STP) ನಿರ್ಮಾಣ ಹಂತದಲ್ಲಿವೆ ಹಾಗೂ 17 ಗೃಹ ತ್ಯಾಜ್ಯ ನೀರಿನ ಸಂಸ್ಕರಣಾ ಘಟಕಗಳ (STP) ಸ್ಥಾಪನೆಗೆ ಪ್ರಸ್ತಾಪಿಸಲಾಗಿದೆ.<br><br>• ಬೆಂಗಳೂರು ನಗರದಲ್ಲಿ ಇರುವ ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿನ ಸಣ್ಣ ಕೈಗಾರಿಕೆಗಳಿಗೆ ಅನುಕೂಲವಾಗುವ ಉದ್ದೇಶದಿಂದ ಮಂಡಳಿಯ ವತಿಯಿಂದ ಸಾಮೂಹಿಕ ತ್ಯಾಜ್ಯ ಸಂಸ್ಕರಣಾ ಘಟಕ (CETP) ವನ್ನು ಸ್ಥಾಪಿಸುವ ಕುರಿತು ಬೆಂಗಳೂರಿನ ಪೀಣ್ಯದಲ್ಲಿರುವ ಅರ್ಬನ್ ಇಕೋ ಪಾರ್ಕ್‌ನಲ್ಲಿ 125ಕೆ.ಎಲ್.ಡಿ. ಸಾಮರ್ಥ್ಯದ ಸಿಇಟಿಪಿಯನ್ನು ಸ್ಥಾಪಿಸಲು ಟೆಂಡರ್ ಕರೆಯುವ ಕಾರ್ಯ ಪ್ರಕ್ರಿಯೆ ಪ್ರಗತಿಯಲ್ಲಿದೆ.<br><br>• ಇದರ ಜೊತೆಗೆ ಬೆಂಗಳೂರಿನ ಪಕ್ಕದಲ್ಲಿ ಸಾಮೂಹಿಕ ತ್ಯಾಜ್ಯ ಸಂಸ್ಕರಣಾ ಘಟಕಗಳು(CETPs):ನಗರದಲ್ಲಿನ ಸಣ್ಣ ಕೈಗಾರಿಕೆಗಳಿಂದ ಹಾಗೂ ವಿವಿಧ ಚಟುವಟಿಕೆಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಸಂಗ್ರಹಿಸಿ, ಸಂಸ್ಕರಿಸುವ ಮತ್ತು ವಿಲೇವಾರಿ ಮಾಡಲು CETP ಪರಿಕಲ್ಪನೆಯನ್ನು ಪರಿಚಯಿಸಲಾಗಿದ್ದು. ಸಣ್ಣ ಪ್ರಮಾಣದ ಕೈಗಾರಿಕೆಗಳಿಂದ ಉತ್ಪತ್ತಿಯಾಗುವ ಕೈಗಾರಿಕಾ ತ್ಯಾಜ್ಯ ನೀರನ್ನು ಬೆಂಗಳೂರಿನ ಸಮೀಪ ಸ್ಥಾಪಿತವಾಗಿರುವ 04 CETP ಘಟಕಗಳಿಂದ ಸಾಮೂಹಿಕ ಸಂಸ್ಕರಣೆ ಮಾಡಲಾಗುತ್ತಿದೆ. |

| | | |
|---|---|---|
| | | • ಬೆಂಗಳೂರಿನಲ್ಲಿರುವ ಸುಮಾರು 130 ಕೆರೆಗಳ ನೀರಿನ ಗುಣಮಟ್ಟ ತಿಳಿಯಲು ನೀರಿನ ಮಾದರಿಗಳನ್ನು ನಿಯಮಿತವಾಗಿ ಸಂಗ್ರಹಿಸಿ ಗುಣಮಟ್ಟವನ್ನು ಮಾಪನ ಮಾಡಲಾಗುತ್ತಿದ್ದು, ಈ ಕೆರೆಗಳ ನೀರಿನ ಗುಣಮಟ್ಟವು CPCB Guidelines ಪ್ರಕಾರ Class D ಮತ್ತು E ವರ್ಗದಲ್ಲಿ ಬರುತ್ತದೆ. |

**ಸಂಖ್ಯೆ:** ಅಪಜೀ 231 ಇಪಿಸಿ 2026

**(ರಾಮಲಿಂಗಾರೆಡ್ಡಿ)**

ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು.

ಅನುಬಂಧ-1

**BEFORE THE HON'BLE NATIONAL GREEN TRIBUNAL**

**PRINCIPAL BENCH, DELHI**

**Original Application No. 623/2025**

**BETWEEN**

News Item titled "Govt's efforts to tap
KSPCB funds set to hit legal hurdle"
appearing in The Deccan Herald dated 23.11.2025 ... Applicant
Versus

State of Karnataka & Ors. ... Respondents

**INDEX**

| Sl. NO | Particulars | | Page No. |
|---|---|---|---|
| 1. | Affidavit on behalf of KSPCB | | 1-2 |
| 2. | **Document No.1** | Copy of the details pertaining to collection of Environmental Compensation | 3-4 |

Place Bangalore
Date 01.08.2026

Advocate for KSPCB
A. Mahesh Chowdhary

**BEFORE THE HON'BLE NATIONAL GREEN TRIBUNAL**

**Principal Bench, Delhi**

***Original Application No. 623/2025***

**In the Matter of**

News Item titled *"Govt's efforts to tap KSPCB funds set to hit legal hurdle"* appearing in The Deccan Herald dated 23.11.2025 ...Appellants (s)

**And**

State of Karnataka & Ors ...Respondents

**AFFIDAVIT**

I, Sangeetha Gajanan Bhat, D/o Gajanan Bhat, aged about 51 years, working as Chief Finance Officer in the Karnataka State Pollution Control Board (KSPCB), having its office at Parisara Bhavana, 1st to 5th Floor, Church Street, Bengaluru – 560001, being duly authorized to swear this affidavit on behalf of the Respondent Board, do hereby solemnly affirm and state as follows:

1. I am the deponent herein and am well acquainted with the facts and records of the present case. I am duly authorized to file the present affidavit on behalf of the Karnataka State Pollution Control Board.

2. The present affidavit is filed in compliance with the order dated 14.05.2026 passed by this Hon'ble Tribunal in the above Original Application, whereby this Hon'ble Tribunal directed all State Pollution Control Boards and Pollution Control Committees to disclose complete details regarding utilisation of the Environmental Damage/Environmental Compensation Fund for at least the previous three years.

Chief Finance Officer

3. It is respectfully submitted that the Karnataka State Pollution Control Board has maintained a separate account of the Environmental Compensation amounts collected. The statement showing the Environmental Compensation collected from inception till June 2026 is enclosed as **Document No. 1**. The statement reflects that a total Environmental Compensation of ₹16,39,95,976/- has been collected (exclusive of interest), interest accrued amounts to ₹2,59,76,850/-, and the total amount available including interest is ₹18,99,72,826/-

4. I respectfully submit that the above information is furnished in faithful compliance with the directions issued by this Hon'ble Tribunal under the Order dated 14.05.2026. It is respectfully submitted that the Environmental Compensation Fund collected by the Karnataka State Pollution Control Board has not been utilised for any purpose.

5. The Respondent Board respectfully prays that this Hon'ble Tribunal may be pleased to take the present affidavit and Document No. 1 on record and pass such further orders as this Hon'ble Tribunal may deem fit in the facts and circumstances of the case.

WHEREFORE, in the above facts and circumstances, it is most respectfully prayed that this Hon'ble Tribunal may be pleased to take this affidavit on record in the interest of justice and equity.

**Place**

**Date**

**DEPONENT**

Chief Finance Officer
Karnataka State Pollution Control Board
Bengaluru - 560 001

**Identified by me,**

**Advocate**

CHANDRASHEKARAIAH. S
Advocate & Notary

# ENVIRONMENTAL COMPENSATION CHARGES COLLECTED FROM INCEPTION TO TILL DATE

Amt In Rs.

| Sl No | Year | Amount without Interet | EC Interest Amount | Total EC with Interest Amount |
|---|---|---|---|---|
| 1 | 2 | 3 | 4 | 5 (3+4) |
| 1 | 2019-20 | 12000000 | 0 | 12000000 |
| 2 | 2020-21 | 12600000 | 785277 | 13385277 |
| 3 | 2021-22 | 5000000 | 1867819 | 6867819 |
| 4 | 2022-23 | 8548030 | 1930650 | 10478680 |
| 5 | 2023-24 | 61597321 | 3554054 | 65151375 |
| 6 | 2024-25 | 39389063 | 3554054 | 42943117 |
| 7 | 2025-26 | 21286562 | 11279009 | 32565571 |
| 8 | 2026-27 (Upto June 26) | 3575000 | 3005987 | 6580987 |
| | Total | 163995976 | 25976850 | 189972826 |

**Chief Finance Officer**

To

Law Officer
Law Section
KSPCB, B'lore

# ENVIRONMENTAL COMPENSATION CHARGES COLLECTED FROM 2023-24 TO 2025-26

Amt In Rs.

| Sl No | Year | Amount without Interet | EC Interest Amount | Total EC with Interest Amount |
|---|---|---|---|---|
| 1 | 2 | 3 | 4 | 5 (3+4) |
| 1 | 2023-24 | 61597321 | 3554054 | 65151375 |
| 2 | 2024-25 | 39389063 | 3554054 | 42943117 |
| 3 | 2025-26 | 21286562 | 11279009 | 32565571 |
| | Total | 122272946 | 18387117 | 140660063 |

* Fund has not been utilized for any purpose.

* The Audit of said EC fund for the year 2023-24, 2024-25 is completed and report submitted to Govt and the audit for the year 2025-26 is yet to be started.

Chief Finance Officer

To

Law Officer
Law Section
KSPCB, B'lore

10/273
23/7/26